ಯುವಜನ ಸೇವಾ ಇಲಾಖೆಯು ಯುವಕರಿಗೆ ಒದಗಿಸಿರುವ ಸೌಲಭ್ಯಗಳು.

೨೧೨೪(೨೭೧೮)

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಯುವಜನ ಸೇವೆ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯುವಜನ ಸೇವಾ ಇಲಾಖೆಯು ಯುವಕರಿಗೆ ಯಾವ ಸಹಾಯವನ್ನು ನೀಡುವುದು?

ಆ) ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲೂಕು ಮಟ್ಟದಲ್ಲಿ ಯುವಜನ ಇಲಾಖೆಯವರು ಯುವಕರಿಗೆ ಯಾವ ಸಹಾಯ ಮಾಡುವರು?

ಇ) ಯುವಜನ ಸೇವಾ ಇಲಾಖೆಯವರು ಪ್ರೌಢಶಾಲೆಗಳಿಗೆ ತರಬೇತಿದಾರರನ್ನು ಕೊಡಲು ವಿನಂತಿಸಿದಾಗ ತರಬೇತಿದಾರರಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ವರ್ಷ ಎಷ್ಟು ಪ್ರೌಢಶಾಲೆಗಳಿಗೆ ಮತ್ತು ಯುವಕ ಮಂಡಳಿಗಳಿಗೆ ತರಬೇತಿದಾರರನ್ನು ಕಳುಹಿಸಿ, ತರಬೇತಿ ನೀಡಲಾಗುವುದು?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಯುವಜನ ಸೇವೆ ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯು ಯುವ ಜನರಲ್ಲಿರುವ ಅಸಾಧಾರಣ ಪ್ರತಿಭೆ ಹಾಗೂ ಗಣನೀಯವಾಗಿ ಸಲ್ಲಿಸುತ್ತಿರುವ ಸಮಾಜ ಸೇವೆಯನ್ನು ಗುರುತಿಸಿ ಪ್ರೋತ್ಸಾಹಿಸಲು ರಾಜ್ಯಮಟ್ಟದಲ್ಲಿ ಪ್ರತಿ ವರ್ಷವೂ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ರಾಜ್ಯ ಪ್ರಶಸ್ತಿಯನ್ನು ೧೦ ಜನ ಯುವಕ: ಯುವತಿಯರಿಗೆ ತಲಾ ೫,೦೦೦-೦೦ ರೂ.ಗಳಂತೆ ಹಾಗೂ ೨ ಸಂಸ್ಥೆಗಳಿಗೆ ತಲಾ ರೂ.೨೫,೦೦೦-೦೦ಗಳನ್ನು ನಗದು ಬಹುಮಾನ ಹಾಗೂ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ರಾಷ್ಟ್ರ ಮಟ್ಟದಲ್ಲಿ ಪ್ರತಿ ವರ್ಷವೂ ಪ್ರಶಸ್ತಿಗಳಿಗಾಗಿ ಆಯ್ದ ಯುವಕ ಯುವತಿಯರ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಇಲಾಖೆಯ ಮುಖಾಂತರ ಕಳುಹಿಸಿಕೊಡಲಾಗುತ್ತಿದೆ. ಯುವಕರಿಗಾಗಿ ಈ ಇಲಾಖೆಯಿಂದ ಯುವಜನ ಶಿಬಿರಗಳು ಮತ್ತು ಮೇಳಗಳು ರಾಜ್ಯ ಯುವಜನೋತ್ಸವ ಯುವಜನ ತರಬೇತಿ ಕಾರ್ಯಕ್ರಮದ ಅಡಿಯಲ್ಲಿ ವಿದ್ಯಾನಗರದಲ್ಲಿನ ಶ್ರೀ ಜಯಪ್ರಕಾಶ್ ನಾರಾಯಣ ರಾಷ್ಟ್ರೀಯ ಯುವಜನ ತರಬೇತಿ ಕೇಂದ್ರದಲ್ಲಿ ಮತ್ತು ಕುಂಬಳಗೂಡು

ಯುವಜನ ತರಬೇತಿ ಕೇಂದ್ರದಲ್ಲಿ ಯುವಕ ಯುವತಿಯರ ವ್ಯಕ್ತಿತ್ವ ವಿಕಾಸ ಮತ್ತು ಬೆಳವಣಿಗೆಗೆ ಸಂಬಂಧಪಟ್ಟಂತೆ ''ಯುವ ಚೇತನ'' ಹಾಗೂ ಯುವಕ ಯುವತಿಯರನ್ನು ಸ್ವಯಂ ಉದ್ಯೋಗದಲ್ಲಿ ತೊಡಗಿಸುವಲ್ಲಿ ಆತ್ಮ ವಿಶ್ವಾಸ ಬೆಳೆಸುವುದಕ್ಕೆ 'ಯುವ ಪ್ರೇರಣೆ' ತರಬೇತಿ ಶಿಬಿರಗಳನ್ನು ನಡೆಸಲಾಗುತ್ತಿದೆ.

ಯುವಕರಿಗಾಗಿ ಯುವ ಸಂಪರ್ಕ ಸಭೆಗಳನ್ನು ಯುವ ಜನರ ಭಾವನೆಗಳನ್ನು ಹಾಗೂ ಆಶೋತ್ತರಗಳನ್ನು ಪ್ರತಿಬಿಂಬಿಸಲು ಯುವ ಕರ್ನಾಟಕ ಮಾಸ ಪತ್ರಿಕೆಯನ್ನು ಪ್ರಕಟಿಸಲಾಗುತ್ತಿದೆ. ಸದರಿ ಪತ್ರಿಕೆಯಲ್ಲಿ ಯುವ ಬರಹಗಾರರ ಲೇಖನಗಳನ್ನು ಪ್ರಕಟಿಸಿ ಅವರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಇದಲ್ಲದೆ ಕರ್ನಾಟಕ ಅಭಿವೃದ್ಧಿ ದಳ ಯೋಜನೆಯಡಿಯಲ್ಲಿ ೩೦ ವರ್ಷಕ್ಕಿಂತ ಕಡಿಮೆ ವಯಸ್ಸಿನ ನಿರುದ್ಯೋಗಿ ಪದವೀಧರರಿಗೆ ಮಾಸಿಕ ರೂ.೧,೦೦೦-೦೦ಗಳ ಗೌರವ ಧನ ನೀಡುವ ಮೂಲಕ ಒಂದು ವರ್ಷದ ಅವಧಿಯವರೆಗೆ ಸ್ವಯಂ ಸೇವಕರನ್ನಾಗಿ ನೇಮಕ ಮಾಡಿಕೊಳ್ಳುವ ಯೋಜನೆಯನ್ನು ೨೦೦೦-೨೦೦೧ನೇ ಸಾಲಿನಿಂದ ಪುನರ್ ಅನುಷ್ಠಾನಗೊಳಿಸಲಾಗುತ್ತಿದೆ. ಸ್ವಯಂ ಸೇವಕರನ್ನು ಶಿಕ್ಷಣ ಸಂಸ್ಥೆಗಳು, ವಿದ್ಯಾರ್ಥಿನಿಲಯ ಆಸ್ಪತ್ರೆ ಮುಂತಾದ ಸಾರ್ವಜನಿಕ ಸೇವಾ ಸಂಸ್ಥೆಗಳಲ್ಲಿ ಸೇವೆ ಮಾಡಲು ನಿಯೋಜಿಸಲಾಗುವುದು.

೪) ಜಿಲ್ಲಾ ಮಟ್ಟ ಹಾಗೂ ತಾಲ್ಲೂಕು ಮಟ್ಟದಲ್ಲಿ ಯುವಕರಿಗಾಗಿ ಸಾಂಸ್ಕೃತಿಕ ಹಾಗೂ ಜಾನಪದ ಪ್ರತಿಭೆಯನ್ನು ಪ್ರೋತ್ಸಾಹಿಸಲು ಪ್ರತಿ ವರ್ಷವೂ ಯುವಜನ ಶಿಬಿರಗಳು ಹಾಗೂ ರ್ಯಾಲಿಗಳನ್ನು ಏರ್ಪಡಿಸಲಾಗುತ್ತಿದೆ. ಪ್ರತಿ ವರ್ಷವೂ ತಾಲ್ಲೂಕು ಮಟ್ಟದಿಂದ ರಾಜ್ಯಮಟ್ಟದವರೆಗೆ ಸುಮಾರು ೪,೦೦೦ ಯುವಕ ಯುವತಿಯರು ಮೇಳಗಳಲ್ಲಿ ಭಾಗವಹಿಸಿ, ಪ್ರಯೋಜನ ಪಡೆಯುತ್ತಿದ್ದಾರೆ. ಸ್ವಾಮಿ ವಿವೇಕಾನಂದ ಜನ್ಮ ದಿನೋತ್ಸವದ ಅಂಗವಾಗಿ ದಿನಾಂಕ:೧೨ನೇ ಜನವರಿಯಿಂದ ೧೬ ಜನವರಿ ೨೦೦೦ದವರೆಗೆ ಯುವ ಸಪ್ತಾಹ ಕಾರ್ಯಕ್ರಮವನ್ನು ಜಿಲ್ಲಾ ಮಟ್ಟದಲ್ಲಿ ಏರ್ಪಡಿಸಲಾಗಿತ್ತು. ಯುವ ಸಂಪರ್ಕ ಸಭೆಗಳನ್ನು ಸಹ ಜಿಲ್ಲಾ ಮಟ್ಟದಲ್ಲಿ ಏರ್ಪಡಿಸಲಾಗುತ್ತಿದೆ.

೫) ಇಲ್ಲ.

೬) ಪ್ರೌಢಶಾಲೆಗಳ ಹಾಗೂ ಯುವಕ ಮಂಡಳಿಗಳಿಂದ ಕೋರಿಕೆ ಬಂದಲ್ಲಿ ತರಬೇತಿದಾರರನ್ನು ಖಾಯಂ ಆಗಿ ಕೊಡುವ ಯೋಜನೆ ಇಲ್ಲ. ತಾತ್ಕಾಲಿಕವಾಗಿ ಕೋರಿಕೆಯ ಆಧಾರದ ಮೇಲೆ ತರಬೇತಿದಾರರನ್ನು ನಿಯೋಜಿಸಲಾಗುತ್ತಿದೆ.

ಕೇಂದ್ರ ಸರ್ಕಾರದಿಂದ ಯುವಜನ ಸೇವಾ ಇಲಾಖೆಗೆ ದೊರೆಯುವ ಸಹಾಯ.